# ಚಳವಳಿ ಮತ್ತು ಮಹಿಳೆ

ಭಾರತೀಯ ಮಹಿಳಾ ಚಳವಳಿಗಳು ಪಾಶ್ಚಾತ್ಯ ಪರಿಕಲ್ಪನೆಯಾದ ಸಾಮಾಜಿಕ ಪ್ರತ್ಯೇಕೀಕರಣ ((Social Exclusion)ವನ್ನು ಅನಾಮತ್ತಾಗಿ ಎತ್ತಿ ತಮ್ಮದಾಗಿಸಿಕೊಂಡು ಚಳವಳಿಯ ಸಿದ್ಧಾಂತಗಳನ್ನು ರೂಪಿಸಿಕೊಂಡಿವೆ. ಹಾಗಾಗಿ ಮಹಿಳಾ ಚಳವಳಿಯಲ್ಲಿ ಜಾತಿಪ್ರಶ್ನೆ ಇದುವರೆಗೂ ಗೌಣವಾಗಿ ಕಂಡಿದೆ. ಇದನ್ನು ಪುಷ್ಟೀಕರಿಸುವಂತೆ ವರ್ಣಾಶ್ರಮ ಪದ್ಧತಿಯ ಹಿನ್ನೆಲೆಯಲ್ಲಿ ಎಲ್ಲಾ ಮಹಿಳೆಯರೂ ಮೈಲಿಗೆಯುಳ್ಳವರಾಗಿರುವುದರಿಂದ ಶೂದ್ರರಾಗಿ ಹುಟ್ಟುತ್ತಾರೆಂಬ ನಂಬಿಕೆಯಿದೆ. ಇದುವರೆವಿಗೂ ಮಹಿಳಾ ಚಳವಳಿಗಳು ನಡೆದುಕೊಂಡು ಬಂದಿರುವುದು ಪ್ರತ್ಯೇಕತಾ ದೃಷ್ಟಿಯಿಂದಲೇ ಹೊರತು ಜಾತಿಪ್ರಜ್ಞೆಯಿಂದಲ್ಲ. ಆದರೆ ಇತ್ತೀಚೆಗೆ ಪ್ರತ್ಯೇಕ ಮಹಿಳಾ ಮೀಸಲಾತಿಯಲ್ಲಿ ಜಾತಿವಾರು ಗಣನೆ ಮುಖ್ಯವೆಂಬ ವಾದ ಮುಂದೆ ಬಂದಾಗ ಕರ್ನಾಟಕದಲ್ಲಿ ಮಹಿಳೆಯರಲ್ಲೇ ಗುಂಪುಗಳಾಗಿ ವಾದಿಸಿವೆ. ಆದ್ದರಿಂದ ಮಹಿಳಾ ಚಳವಳಿ ಜಾತಿಪ್ರಶ್ನೆಯನ್ನು ಇದುವರೆಗೆ ಸರಿಯಾಗಿ ನಿರ್ವಹಿಸಿಲ್ಲ ಎಂದೇ ಹೇಳಬೇಕಾಗುತ್ತದೆ.

ಮುಖ್ಯವಾಹಿನಿಯ ಸ್ತ್ರೀವಾದವು ಯಜಮಾನಿಕೆಯ ರಚನೆಗಳನ್ನು ಪ್ರಶ್ನಿಸಿದೆ, ಕೇವಲ ವಾದದಿಂದ ಅಲ್ಲ, ಮಹಿಳೆಯರು ತಮ್ಮ ನಿಲುವುಗಳನ್ನು ಸ್ಪಷ್ಟವಾಗಿ ನಿರೂಪಿಸಿಕೊಳ್ಳುವುದರಿಂದ ಮತ್ತು ತಾವೇ ಸ್ವತಂತ್ರವಾಗಿ ನೆಲೆಕಂಡುಕೊಳ್ಳುವ ಮೂಲಕ ಪುರುಷ ಪ್ರಾಧಾನ್ಯತೆಯ ಯಜಮಾನಿಕೆಯನ್ನು ತಿರಸ್ಕರಿಸಿದ್ದಾರೆ. ಬಾಹ್ಯಾಕಾಶದ ವಿಜ್ಞಾನಿಯಾಗಿ ಅಮರರಾದ ಕಲ್ಪನಾ ಚಾವ್ಲಾ ಅವರಿಂದ ಹಿಡಿದು ತಸ್ಲೀಮಾ ನಸ್ರೀನ್ ಮತ್ತು ಅಮೇರಿಕಾದಲ್ಲಿ ಖ್ಯಾತ ಉದ್ಯಮಿಯಾಗಿರುವ ಭಾರತದ ಮಹಿಳೆ ಇಂದಿರಾ ನ್ಯೂಯಿರವರೆಗೆ ಅಂತಹ ಅನೇಕ ಉದಾಹರಣೆಗಳು ಸಿಕ್ಕುತ್ತವೆ.

ಪಿತೃಪ್ರಧಾನತೆಯ ಬಹುರೂಪಿತನ ಭಾರತೀಯ ಸಂದರ್ಭದಲ್ಲಿ ನಿಚ್ಚಳವಾಗಿದೆ. ಹೆಣ್ಣಾದವಳು ಬಾಲ್ಯದಲ್ಲಿ ತಂದೆಯ ಆಶ್ರಯದಲ್ಲಿಯೂ, ಗೃಹಸ್ಥದಲ್ಲಿ ಗಂಡನ ಆಶ್ರಯದಲ್ಲಿಯೂ ವೃದ್ಧಾಪ್ಯದಲ್ಲಿ ಮಕ್ಕಳ ಆಶ್ರಯದಲ್ಲಿಯೂ ಬದುಕು ಕಂಡುಕೊಳ್ಳಬೇಕೆಂಬುದು ಶಾಸ್ತ್ರಗಳು ಹೇಳುವ ಮಾತು. ಇಂತಹ ಒಂದು ಕಾನೂನಿನ ಚೌಕಟ್ಟನ್ನು ಒದಗಿಸಿಕೊಟ್ಟಿರುವುದು ಪುರುಷ ಸಮಾಜ. ಇವತ್ತಿನ ಶಿಕ್ಷಿತ ಮಹಿಳೆಯರಲ್ಲಿ ಇದು ನಿಜವಲ್ಲ ಆದರೆ, ಬದಲಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಕೌಟುಂಬಿಕ ನೆಲೆಗಳು ಸಡಿಲಗೊಳ್ಳುತ್ತಿರುವುದು ಗಮನಿಸಬೇಕಾದ ಅಂಶ. ಅನೇಕ ಉದ್ಯೋಗಸ್ಥ ಮಹಿಳೆಯರು ಸ್ವಂತ ಆಯ್ಕೆಯಿಂದ ಈಗ ಅವಿವಾಹಿತರಾಗಿ ಉಳಿಯುತ್ತಿದ್ದಾರೆ. ಬೌದ್ಧಿಕವಾಗಿ ಸಶಕ್ತರಾಗುತ್ತಿದ್ದಂತೆಯೆ ಮಾನಸಿಕ ಸಮತೆ ತಂತಾನೆ ಬೆಳೆಯುತ್ತದೆ. ಆರ್ಥಿಕ ಸದೃಢತೆ ಸ್ವತಂತ್ರ ಆಲೋಚನೆಗಳಿಗೆ ಎಡೆಮಾಡಿಕೊಡುತ್ತದೆ. ಅವಲಂಬನೆ ಕಡಿಮೆಯಾಗುತ್ತದೆ. ತತ್ಪರಿಣಾಮವಾಗಿ ಮದುವೆಯ ಬಂಧನಕ್ಕೆ ಒಳಪಡದೆ ಕರಾರು ಒಪ್ಪಂದದ ಮೇಲೆ ಜೀವಿಸುವವರ ಸಂಖ್ಯೆಯು ದಿನೇ ದಿನೇ ಬೆಳೆಯುತ್ತಿದೆ. ಮದುವೆ ಇಲ್ಲದೆ ಮಗುವನ್ನು ಪಡೆಯುವ ಮಾರ್ಗಗಳನ್ನು ಹುಡುಕುತ್ತಿರುವವರ ಸಂಖ್ಯೆಯೂ ಗಣನೀಯವಾಗಿದೆ. ಇವೆಲ್ಲವೂ ಅಘೋಷಿತ, ಅಪ್ರಕಟ ಚಳವಳಿಯ ಭಾಗವೇ ಆಗಿದೆ.

ಹೆಣ್ಣು ತನ್ನ ಲೈಂಗಿಕತೆಯ ನಿಯಮಾವಳಿಗಳನ್ನು ಮರುರೂಪಿಸಿಕೊಳ್ಳುತ್ತಿರುವುದು ಈ ಕಾಲಘಟ್ಟದ ಬಹು ಮುಖ್ಯ ಸ್ಥಿತ್ಯಂತರಗಳಲ್ಲೊಂದು ಎಂದು ತಿಳಿಯಬೇಕಾಗಿದೆ. ಅದರೊಂದಿಗೆ ನೈತಿಕತೆಯ ಪರಿಮಾಣಗಳೂ ಬದಲಾಗುತ್ತಾ ಹೋಗುತ್ತವೆ. ಕೇವಲ ಭಾವನಾಮಯತೆ, ಸೌಂದರ್ಯವಾಹಕ ಸರಕಿಗೆ ಮಾದರಿಯಾಗುವ ಮಿತಿಗಳಿಂದ ಹೊರಬಂದು ಮಹಿಳೆ ತನ್ನ ಸ್ವಂತಿಕೆಯನ್ನು ನಿರೂಪಿಸಿಕೊಳ್ಳುತ್ತಿರುವುದು ಸ್ವಾಗತಾರ್ಹ.

ಮಹಿಳಾ ಚಳವಳಿ ಅಂಬೇಡ್ಕರ್ ಚಿಂತನೆಗಳನ್ನು ಪೂರಕವಾಗಿಸಿಕೊಳ್ಳಲಿಲ್ಲ ಎಂಬುದು ವಿಷಾದನೀಯ. ಅಂಬೇಡ್ಕರ್ ಚಿಂತನೆಗಳ ಬಗ್ಗೆ ಪೂರ್ವಗ್ರಹ ಇರುವುದೇ ಇದಕ್ಕೆ ಕಾರಣವಿರಬೇಕು. ಅಂಬೇಡ್ಕರ್‌ರವರು ಕೇವಲ ದಲಿತರಿಗಾಗಿ ಚಿಂತನೆ ನಡೆಸಿದರು ಎಂಬ ಅಪ್ಪಟ ಸುಳ್ಳು ಕಲ್ಪನೆ ದಲಿತೇತರರಲ್ಲಿ ಚಾಲ್ತಿಯಲ್ಲಿದೆ. ಅಂಬೇಡ್ಕರ್ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಇತ್ತದ್ದು ತಾವು ರೂಪಿಸಿದ ಹಿಂದೂ ಕೋಡ್ ಬಿಲ್‌ಗೆ ಒಪ್ಪಿಗೆ ಸಿಗದ ಕಾರಣ ಎಂಬುದು ಅನೇಕ ಮಹಿಳೆಯರಿಗೆ ತಿಳಿದೇ ಇಲ್ಲ. ಹಾಗೆ ನೋಡಿದರೆ ಭಾರತದ ಸಮಷ್ಟಿ ಮಹಿಳಾ ಕುಲವೇ ಅಂಬೇಡ್ಕರ್ ಅವರಿಗೆ ಋಣಿಯಾಗಿರಬೇಕಾಗುತ್ತದೆ. ಮೊಟ್ಟಮೊದಲನೆಯದಾಗಿ ಮಹಿಳೆಯರಿಗೆ ಆಸ್ತಿ ಹಕ್ಕು ಮತ್ತು ವಿಚ್ಛೇದನ ಹಕ್ಕುಗಳನ್ನು ಕಾನೂನಿನ ಮೂಲಕ ದೊರಕಿಸಿಕೊಡಲು ಪ್ರಯತ್ನಿಸಿದವರೆ ಡಾ. ಬಾಬಾಸಾಹೇಬ್ ಅಂಬೇಡ್ಕರ್. ಮೇಲ್ಜಾತಿ ಮಹಿಳೆಯರ ಅಧ್ಯಯನದ ಕೊರತೆ ಅಥವಾ ಜಾತಿ ಪ್ರಜ್ಞೆಯ ಪೂರ್ವಗ್ರಹ ಅಂಬೇಡ್ಕರ್‌ರವರ ಚಿಂತನೆಗಳನ್ನು ಮಹಿಳಾ ಚಳವಳಿಯಿಂದ ಹೊರಗಿಟ್ಟಿದೆ.

ಎಲ್ಲ ಕ್ಷೇತ್ರಗಳಂತೆಯೆ ದಲಿತ ಮಹಿಳೆಯರನ್ನು ಪ್ರತ್ಯೇಕವಾಗಿ ನೋಡುವ ಅವಶ್ಯಕತೆ ಇದ್ದೇ ಇದೆ. ನಿಶ್ಚಿತವಾಗಿಯೂ ದಲಿತ ಮಹಿಳೆಯರ ಬದುಕು ಇತರೆ ಮಹಿಳೆಯರ ಬದುಕಿಗಿಂತ ಭಿನ್ನವಾಗಿದೆ. ಅದಕ್ಕೆ ಕಾರಣ ಅತಿಯಾದ ಬಡತನ ಮತ್ತು ಸಮಾಜದಲ್ಲಿ ಕೀಳು ಕೆಲಸಗಳನ್ನು ಮಾಡಲೇಬೇಕಾದ ಅನಿವಾರ್ಯತೆ. ಆದ್ದರಿಂದ ಅವರ ಅಭಿವೃದ್ಧಿಯ ಕಾಳಜಿಗಳನ್ನು ಒಳಗೊಳ್ಳುವ ಒಂದು ನಿರ್ದಿಷ್ಟ ತಾತ್ವಿಕ ಪ್ರಣಾಳಿಕೆಯ ಅಗತ್ಯವೂ ಇದೆ. ಈ ಪ್ರಣಾಳಿಕೆಯಲ್ಲಿ ಖಡ್ಡಾಯ ಶಿಕ್ಷಣ, ಆರ್ಥಿಕ ಸಬಲತೆಗೆ ಅವಕಾಶಗಳು, ಗ್ರಾಮೀಣ ಮಹಿಳೆಯರಿಗೆ ಭೂ ಒಡೆತನ ಕಲ್ಪಿಸುವುದು, ರಾಜಕೀಯ ಮೀಸಲಾತಿಯನ್ನು ನಾಮಕಾವಸ್ಥೆಯಾಗಿಸದೇ ಮಹಿಳೆಯರೇ ಆಡಳಿತ ನಡೆಸುವಂತೆ ಕೈ ಬಲಪಡಿಸುವುದು ಇತ್ಯಾದಿ ಸಕಾರಾತ್ಮಕ ನಿಲುವುಗಳಿಗೆ ಶಾಸನದ ಬೆಂಬಲವಿರಬೇಕಾಗುತ್ತದೆ. ಮಹಿಳಾ ಚಳವಳಿ ದಲಿತ ಮಹಿಳೆಯರನ್ನು ಸಕ್ರಿಯವಾಗಿ ಒಳಗೊಂಡಾಗಲೇ ಚಳವಳಿಗೆ ಹೊಸ ರೂಪ ಮತ್ತು ಶಕ್ತಿ ದೊರಕಲು ಸಾಧ್ಯ.

■ ಮೂಚಿ

## ಮಾತೇ ಮುತ್ತು

★ ಚಿಟ್ಟೆಯ ಸೌಂದರ್ಯವನ್ನು ನಾವು ಶ್ಲಾಘಿಸುತ್ತೇವೆ. ಆದರೆ ಆ ಸೌಂದರ್ಯವನ್ನು ಪಡೆಯಲು ಅದು ಹೊಂದಿದ ರೂಪಾಂತರದ ಕಷ್ಟಗಳನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ.
ಮಾಯಾ ಏಂಗಲೊ

★ ಪ್ರೀತಿಯೆಂದರೆ ನ್ಯಾಯದ ಗೈರುಹಾಜರಿ.
ದಲೈ ಲಾಮಾ

★ ಪ್ರೀತಿಯೆಂದರೆ ನಿಟ್ಟುಸಿರಿನ ಜ್ವಾಲೆಯಿಂದ ಎದ್ದ ಹೊಗೆ.
—ವಿಲಿಯಂ ಷೇಕ್ಸ್‌ಪಿಯರ್

★ ನೀವು ಪ್ರೀತಿಯಲ್ಲಿ ಬಿದ್ದರೆ ಅದಕ್ಕೆ ಗುರುತ್ವಾಕರ್ಷಣ ಶಕ್ತಿಯನ್ನು ದೂರಿ ಫಲವಿಲ್ಲ.
—ಆಲ್ಬರ್ಟ್ ಐನ್‌ಸ್ಟೀನ್

★ ಸಾವಿರ ತಲೆಗಳು ಪ್ರಾರ್ಥನೆಯಲ್ಲಿ ಬಾಗುವುದಕ್ಕಿಂತ ಇನ್ನೊಬ್ಬನಿಗೆ ಸಂತೋಷ ಕೊಡುವ ಒಂದು ಹೃದಯದ ಒಂದು ಕೆಲಸ ಲೇಸು.
—ಮಹಾತ್ಮ ಗಾಧಿ

★ ನೀವು ಯಾರೆಂದು ಗೊತ್ತಾಗಬೇಕೆ? ಕ್ರಿಯಾಶೀಲರಾಗಿ. ನಿಮ್ಮ ಕ್ರಿಯೆಗಳೇ ನಿಮ್ಮನ್ನು ವರ್ಣಿಸುತ್ತವೆ.
ಥಾಮಸ್ ಜಫರ್ಸನ್

★ ಪ್ರೀತಿ ಎನ್ನುವುದು ನೀವು ಹುಡುಕುವುದಲ್ಲ, ಅದೇ ನಿಮ್ಮನ್ನು ಹುಡುಕುತ್ತದೆ.
—ಲೊರೆಟ್ಟಾ ಯಂಗ್

★ ಪ್ರೀತಿಗೆ ಜೋತು ಬಿದ್ದುಬಿಡಿ; ದ್ವೇಷದ ಹೊರೆ ಹೊರಲಾಗದಷ್ಟು ಭಾರವಿದೆ.
—ಮಾರ್ಟಿನ್ ಲೂಥರ್ ಕಿಂಗ್ ಜೂ.

★ ಪ್ರೀತಿಯ ಮೊದಲ ಕರ್ತವ್ಯವೆಂದರೆ ಆಲಿಸುವುದು.
—ಪಾಲ್ ಟಿಲಿಕ್

★ ನಮಗೇನು ಗೊತ್ತಿದೆ ಮತ್ತು ಏನು ಗೊತ್ತಿಲ್ಲ ಎನ್ನುವುದನ್ನು ತಿಳಿದುಕೊಳ್ಳುವುದೇ ನಿಜವಾದ ಜ್ಞಾನ.
—ಕನ್‌ಫ್ಯೂಷಿಯಸ್

★ ಓದದೇ ಇರುವವನು, ಓದಲು ಗೊತ್ತಿಲ್ಲದವನಷ್ಟೇ ಬುದ್ಧಿವಂತ.
—ಮಾರ್ಕ್ ಟ್ವೈನ್